# ಪ್ರಭಾವವಲಯ ಮತ್ತು ಕಾಳಜಿವಲಯ ಪರಿಕಲ್ಪನೆಗಳು

- “ನಾನು ಏನೆಲ್ಲಾ ಮಾಡಬಹುದೋ ಅದನ್ನೆಲ್ಲಾ ಮಾಡಿದ್ದೇನೆ. ಪರಿಸ್ಥಿತಿ ಕೈಮೀರಿತ್ತು. ಸನ್ನಿವೇಶ ಹೀಗಿದ್ದಿದ್ದರೆ ಏನಾದರೂ ಮಾಡಬಹುದಿತ್ತು ”
  - “ಇದು ನನ್ನ ಕೈಲಿರಲಿಲ್ಲ, ಇದನ್ನೂ ಮೀರಿ ಯೋಚಿಸಲಾಗುವುದಿಲ್ಲ "
- “ಇದರ ವಿಷಯವಾಗಿ ನಾನು  ಏನಾದರೂ ಮಾಡಬಲ್ಲೆ, ನೋಡೋಣ, ಸ್ವಲ್ಪ ಸಮಯ ತೆಗೆದು ಕೊಂಡು ಯೋಚಿಸಿದರೆ ಖಂಡಿತ ಏನಾದರೂ ಮಾಡಬಹುದು "

ಡಾ.ಸ್ಟೀವೆನ್ ಕೋವೆ (Stephen Covey ) ಅವರು ತಮ್ಮ ಪ್ರಖ್ಯಾತ ಪುಸ್ತಕವಾದ 'The 7 habits of highly effective people ನಲ್ಲಿ ಮೊದಲೆರಡು ಪ್ರತಿಕ್ರಿಯೆಗಳಿಗೆ 'ಪ್ರತಿಕ್ರಿಯಾತ್ಮಕ ಪ್ರವೃತ್ತಿ ' (Reactive) ಎಂದೂ ಮೂರನೆಯದಕ್ಕೆ ಪ್ರಕ್ರಿಯಾತ್ಮಕ ಪ್ರವೃತ್ತಿ (Proactive) ಎಂದೂ ಕರೆಯುತ್ತಾರೆ.

- ಪ್ರಕ್ರಿಯಾತ್ಮಕ ಎಂದರೆ ಪೂರ್ವಭಾವಿಯಾಗಿ ಕಾರ್ಯಕ್ರಮವನ್ನು ಕೈ ಗೊಂಡು ಸಂದರ್ಭವೊಂದನ್ನು/ಪರಿಸ್ಥಿತಿಯನ್ನು, ಸೃಷ್ಟಿಸುವ ಅಥವಾ ನಿಯಂತ್ರಿಸುವುದು.
- ಪ್ರಕ್ರಿಯಾತ್ಮಕ ಎಂದರೆ " ನಮ್ಮ ಜೀವನ, ಆಯ್ಕೆ ಮತ್ತು ನಾವು ಮಾಡುವ ಕೆಲಸಕ್ಕೆ ನಾವೇ ಜವಾಬ್ದಾರರು'. ನಾನು ಮಾಡಬೇಕಾದ ಕಾರ್ಯದ ದಿಕ್ಕನ್ನು ನಾನೇ ನಿರ್ದೇಶಿಸುತ್ತೇನೆ /ನಾನೇ ಕಾರ್ಯೋನ್ಮುಖಳಾಗುತ್ತೇನೆ' - ಸ್ಟೀವನ್ ಕೋವೆ

# ಕಾಳಜಿ ವಲಯ/ ಪ್ರಭಾವ ವಲಯ



# ಪ್ರಭಾವ ವಲಯ

Things you can’t control

ನಮ್ಮ ಹಿಡಿತದಲ್ಲಿ ಇಟ್ಟು ಕೊಳ್ಳಲು ಆಗದ ವಿಷಯ




Things you can control or change

ನಮಗೆ ಬದಲಾವಣೆ ಮಾಡಲು ಸಾಧ್ಯವಾಗುವ ಅಥವಾ ಹಿಡಿತಕ್ಕೆ ತರಲು ಸಾಧ್ಯವಿರುವ ವಿಷಯಗಳು / ಸಮಸ್ಯೆಗಳು.

Focus on things you can change or influence

ನಿಮ್ಮಿಂದ ಬದಲಾವಣೆ ಅಥವಾ ಪ್ರಭಾವ ಬೀರಲು ಸಾಧ್ಯವಾಗುವಂತಹ ವಿಷಯದ ಮೇಲೆ ಕೇಂದ್ರೀಕರಿಸಿ

# ಪ್ರಕ್ರಿಯಾತ್ಮಕ ವ್ಯಕ್ತಿಗಳು

- ತಮ್ಮ ಪ್ರಭಾವ ವಲಯದಲ್ಲಿನ ವಿಷಯಗಳಿಗೆ ಪ್ರಾಮುಖ್ಯತೆ / ಗಮನ ಕೊಡುತ್ತಾರೆ.
- ತಾಯಿತಂದೆಯರನ್ನಾಗಲೀ, ಸನ್ನಿವೇಶವನ್ನಾಗಲೀ, ಅನುವಂಶೀಯ ಗುಣಗಳನ್ನಾಗಲೀ ಹಳಿಯುವುದಿಲ್ಲ.
- ತಮ್ಮ ಜೀವನಕ್ಕೆ ತಾವೇ ಜವಾಬ್ದಾರರು ಎಂದು ಅರಿತಿರುತ್ತಾರೆ. ಯಾವುದೇ ನಿರ್ಧಾರಗಳು ಪ್ರಜ್ಞಾಪೂರ್ವಕವಾಗಿದ್ದು  ಮೌಲ್ಯಾಧಾರಿತವಾಗಿರುತ್ತದೆ.
- ಅವಕಾಶಗಳನ್ನು ಸೃಷ್ಟಿಸಿಕೊಂಡು ತಮ್ಮ ಸುತ್ತಲಿನ ಜನರನ್ನು ಸಕಾರಾತ್ಮಕವಾಗಿ ಪ್ರಭಾವಿಸಿ ತಮ್ಮ ಜೀವನದ ಚುಕ್ಕಾಣಿಯನ್ನು ತಾವೇ ಹಿಡಿದು ಪರಿಣಾಮಕಾರಿ ನಾಯಕರಾಗಿ ಉದ್ಭವಿಸುತ್ತಾರೆ.

# ಪ್ರತಿಕ್ರಿಯಾತ್ಮಕ ವ್ಯಕ್ತಿಗಳು

- ತಮ್ಮ ಪರಿಸರ, ಸುತ್ತಲಿನ ವ್ಯಕ್ತಿಗಳನ್ನು, ಸನ್ನಿವೇಶವನ್ನು ಹಳಿಯುವುದರ ಜೊತೆಗೆ  ತಮ್ಮ ಸೋಲಿಗೆ ಅವುಗಳನ್ನೇ ಹೊಣೆ ಮಾಡುತ್ತಾರೆ.
- ಯೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ
- ಇತರರ ತಾತ್ಕಾಲಿಕ ಮೌಲ್ಯಗಳನ್ನು ಅನುಸರಿಸುತ್ತಾರೆ
- ಯಾವುದೇ ರೀತಿಯ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದಿಲ್ಲ
- ಕಷ್ಟ ಎನಿಸಿದ ಕೆಲಸಗಳನ್ನು ಸುಲಭವಾಗಿ ಕೈ ಬಿಡುತ್ತಾರೆ
- ಕೋಪದಲ್ಲಿದ್ದಾಗ ಉಪಯೋಗಿಸುವ ಭಾಷೆಯ ಮೇಲೆ ಗಮನವಿರುವುದಿಲ್ಲ

# ಪ್ರಭಾವ ವಲಯವನ್ನು ಏಕೆ ವಿಸ್ತರಿಸಬೇಕು?

- ವೈಯಕ್ತಿಕ ಮತ್ತು ವೃತ್ತಿ ಜೀವನದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು
- ನಮ್ಮ ಸುತ್ತಲಿನ ಜನಗಳಿಗೆ ಪ್ರೇರಕ ಶಕ್ತಿಯಾಗಿ ಅವರ ಮೇಲೆ ಪ್ರಭಾವವನ್ನು ಬೀರಲು
- ಭಾಗೀದಾರರ ಭಾಗವಹಿಸುವಿಕೆಯನ್ನು ಪರಿಣಾಮಕಾರಿಯಾಗಿಸಲು
- ಪರಿಣಾಮಕಾರಿ ನಾಯಕರಾಗಿ ಹೊರ ಹೊಮ್ಮಲು
- ಸಹಯೋಗದಿಂದ ನಮ್ಮ ಕಾಣ್ಕೆಯನ್ನು ತಲುಪಲು

# ಪ್ರಭಾವ ವಲಯವನ್ನು ಏಕೆ ವಿಸ್ತರಿಸಬೇಕು?

- ವೈಯಕ್ತಿಕ ಪರಿಣಾಮಕಾರಿತ್ವವನ್ನು ಹೆಚ್ಚಿಸಿ ಕೊಳ್ಳಲು
- ನಮ್ಮ ಸುತ್ತಲಿನ ಜನಗಳಿಗೆ ಪ್ರೇರಕ ಶಕ್ತಿಯಾಗಿ ಅವರ ಮೇಲೆ ಪ್ರಭಾವವನ್ನು ಬೀರಲು
- ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಸುಮಾರಿನಿಂದ ಚೆನ್ನಾಗಿದೆ ಎಂಬ ಕಡೆಗೆ ಮತ್ತು ಚೆನ್ನಾಗಿದೆ ಎಂಬುದಕ್ಕಿಂತ ಅತಿ ಚೆನ್ನಾಗಿದೆ ಎಂಬೆಡೆ ಒಯ್ಯುವುದು.
- ಭಾಗೀದಾರರ ಭಾಗವಹಿಸುವಿಕೆಯನ್ನು ಪರಿಣಾಮಕಾರಿಯಾಗಿಸುವುದು.
- ಪರಿಣಾಮಕಾರಿ ನಾಯಕರಾಗಿ ಹೊರ ಹೊಮ್ಮುವುದು
- ಮಾನವ ಸಂಘಜೀವಿ. ಯಾವುದೇ ಸಾಧನೆಯು ಒಬ್ಬರಿಂದಲೇ ಸಾಧ್ಯವಿಲ್ಲ ಎಂದು ಅರಿತು ಕೊಂಡು ವ್ಯವಸ್ಥೆಯಲ್ಲಿನ ಎಲ್ಲ  ಹಂತದ ಭಾಗೀದಾರರಿಗೂ ಅವಕಾಶ ಕೊಟ್ಟು ಅವರ

# ಪ್ರಭಾವ ವಲಯವನ್ನು ವಿಸ್ತರಿಸುವುದು ಹೇಗೆ ?

- ಇತರರನ್ನು ನಾವು ಅರ್ಥಮಾಡಿ ಕೊಂಡರೆ ಅವರು ನಮ್ಮನ್ನು ಅರ್ಥಮಾಡಿ ಕೊಳ್ಳುತ್ತಾರೆ. ಇದನ್ನು ಅಭ್ಯಾಸ ಮಾಡಿ ಕೊಳ್ಳಬೇಕು.(first understand to be understood)
- ಸ್ಪಷ್ಟವಾದ ಕಾಣ್ಕೆ ಮತ್ತು ಸ್ಫುಟವಾದ ಮೌಲ್ಯಗಳಿರಬೇಕು.
- ಸೋಲು ಮತ್ತು ಗೆಲುವುಗಳನ್ನು ಸಮಭಾವದಿಂದ ಕಾಣಬೇಕು.
- ನಮ್ಮ ಕಾರ್ಯ ಮತ್ತು ನಿರ್ಧಾರಗಳಿಗೆ ನಾವೇ ಜವಾಬ್ದಾರರಾಗಬೇಕು.
- ಸಕಾರಾತ್ಮಕ ಮನೋಭಾವ ಮತ್ತು ಅಭಿಪ್ರಾಯ ಇರಬೇಕು
- ನುಡಿದಂತೆ ನಡೆಯಬೇಕು.(walk the talk)

ಮೇಲೆ ಹೇಳಿರುವ ಗುಣಗಳನ್ನು ಹೊಂದಿರುವ ನಾಯಕರನ್ನು ಪ್ರಕ್ರಿಯಾತ್ಮಕ ನಾಯಕರು ಎ೦ದು ಕರೆಯುತ್ತಾರೆ.